## ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 54 ವೆಚ್ಚ-12/2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:29.01.2022

### ಸುತ್ತೋಲೆ

ವಿಷಯ : ಕೆ.ಟಿ.ಪಿ.ಪಿ ಕಾಯಿದೆ ಮತ್ತು ನಿಯಮಗಳನ್ವಯ ಡಿಬಾರ್‌ಮೆಂಟ್ ಸಮಿತಿಯನ್ನು ರಚಿಸುವ ಕುರಿತು.

*****

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು, 2000ರ ನಿಯಮ 26A ರಂತೆ ಟೆಂಡರುದಾರ ಅಥವಾ ಗುತ್ತಿಗೆದಾರ ಅಥವಾ ಸರಬರಾಜುದಾರ ಅಥವಾ ಅವರ ಯಾವುದೇ ಉತ್ತರಾಧಿಕಾರಿಯನ್ನು ಡಿಬಾರ್ (Debar) ಮಾಡುವ ಕುರಿತು ಸಂಗ್ರಹಣಾ ಸಂಸ್ಥೆ (Procurement Entity) ಯ ಹಂತದಲ್ಲಿ ಡಿಬಾರ್‌ಮೆಂಟ್ ಸಮಿತಿ (Debarment Committee) ಯನ್ನು ಸೃಜಿಸಿ ಆದೇಶ ಹೊರಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೆ.ಟಿ.ಪಿ.ಪಿ ಕಾಯಿದೆ ಕಲಂ 2(ಡಿ) ರಡಿ ಸಂಗ್ರಹಣಾ ಸಂಸ್ಥೆಯೆಂದು ವ್ಯಾಖ್ಯಾನಿಸಲಾದ ಎಲ್ಲಾ ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ನಿಗಮ, ಮಂಡಳಿ/ಸರ್ಕಾರದ ಸ್ವಾಮಿತ್ವ ಮತ್ತು ನಿಯಂತ್ರಣದಲ್ಲಿರುವ ಎಲ್ಲಾ ಸಂಸ್ಥೆಗಳ ಹಂತದಲ್ಲಿ ಡಿಬಾರ್‌ಮೆಂಟ್ ಸಮಿತಿಯನ್ನು ಸೃಜಿಸಿ ಆದೇಶ ಹೊರಡಿಸಲು ಕೂಡಲೇ ಕ್ರಮವಹಿಸುವಂತೆ ತಿಳಿಸಿದೆ.

ಡಿಬಾರ್‌ಮೆಂಟ್ ಸಮಿತಿಯನ್ನು ರಚಿಸಲು ಕ್ರಮವಹಿಸದ ಸಂಗ್ರಹಣಾ ಸಂಸ್ಥೆಗಳು ಕೆ.ಟಿ.ಪಿ.ಪಿ ಕಾಯಿದೆ ಕಲಂ 23 ರಡಿ ದಂಡನಾರ್ಹವಾಗಬೇಕಾಗುತ್ತದೆ ಎಂಬುದಾಗಿ ತಿಳಿಸಲಾಗಿದೆ.

(ಶ್ರೀಕೃಷ್ಣ ಎನ್.ಬಗಟ್ಯಾಗೋಳ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಜಿ.ಪಂ.)

ಇವರಿಗೆ:

ಸರ್ಕಾರದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.